ಸಮಗ್ರ ಶಿಕ್ಷಣ – ಕರ್ನಾಟಕ
ರಾಜ್ಯ ಯೋಜನಾ ನಿರ್ದೇಶಕರ ಕಛೇರಿ ಹೊಸ ಸಾರ್ವಜನಿಕ ಕಛೇರಿಗಳ ಪೂರಕ ಕಟ್ಟಡ, ನೃಪತುಂಗ ರಸ್ತೆ,
ಬೆಂಗಳೂರು –560 001

**ಸ.ಶಿ.ಕ/ ಕ.ಚೇ/ಕ.ಹ - 1/2022-23.** **ದಿನಾಂಕ 26/12/2022.**

## ಜ್ಞಾಪನ

**ವಿಷಯ:** ಕಲಿಕಾ ಹಬ್ಬಕ್ಕೆ ಸಂಬಂಧಿಸಿದಂತೆ ತಾಲ್ಲೂಕು ಹಂತದ ಸನಿವಾಸ ರಹಿತ ತರಬೇತಿ ( Non Residential) ಆಯೋಜಿಸುವ ಬಗ್ಗೆ.

**ಉಲ್ಲೇಖ:- 1.** ಕಲಿಕಾ ಹಬ್ಬದ ಸುತ್ತೋಲೆ. ದಿನಾಂಕ: 30/11/2022

ಕಲಿಕಾ ಹಬ್ಬಕ್ಕೆ ಸಂಬಂಧಿಸಿದಂತೆ ಜಿಲ್ಲಾ ಹಂತದಲ್ಲಿ ತಾಲ್ಲೂಕು ಹಂತದ ಸಂಪನ್ಮೂಲ ವ್ಯಕ್ತಿಗಳಿಗೆ (ಟಿ.ಆರ್.ಪಿ) ತರಬೇತಿ ನೀಡಲಾಗಿದೆ. ಟಿ.ಆರ್.ಪಿ ಗಳು ತಾಲ್ಲೂಕು ಹಂತದಲ್ಲಿ ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿಗಳಿಗೆ ತರಬೇತಿ ನೀಡಬೇಕಾಗಿದೆ. ಉಲ್ಲೇಖ 1 ರನ್ವಯ 01 ಜನವರಿ 2023 ರಿಂದ 10 ಜನವರಿ 2023 ರೊಳಗೆ ತಾಲ್ಲೂಕು ಹಂತದಲ್ಲಿ ಎರಡು ದಿನದ ಸನಿವಾಸ ರಹಿತ ತರಬೇತಿಯನ್ನು ಹಮ್ಮಿಕೊಳ್ಳಲು ತಿಳಿಸಿದೆ. ಜಿಲ್ಲಾ ಹಂತದ ತರಬೇತಿಯಲ್ಲಿ 37 ತಾಲ್ಲೂಕುಗಳ 602 ಕ್ಲಸ್ಟರ್ ಗಳ ತರಬೇತಿ ಮುಗಿದಿರುವುದರಿಂದ 167 ತಾಲ್ಲೂಕುಗಳ 3501 ಕ್ಲಸ್ಟರ್ ಗಳಲ್ಲಿ ತರಬೇತಿ ನಡೆಸಬೇಕಾಗಿದೆ. ಕ್ಲಸ್ಟರ್ ನಿಂದ 5 ಸಂಪನ್ಮೂಲ ವ್ಯಕ್ತಿಗಳನ್ನು ಆಯ್ಕೆಮಾಡಿ ಕೊಂಡು ತರಬೇತಿ ನೀಡಬೇಕಾಗಿದೆ.

ಅನುಬಂಧ-1 ರಲ್ಲಿ ತರಬೇತಿ ನಡೆಯಬೇಕಾದ ತಾಲ್ಲೂಕುಗಳ ಹೆಸರು (ಕಾಲಂ ನಂ.5), ಕ್ಲಸ್ಟರ್ ಗಳ ಸಂಖ್ಯೆ (ಕಾಲಂ 6), ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿಗಳ ಸಂಖ್ಯೆ (ಶಿಬಿರಾರ್ಥಿಗಳ ಸಂಖ್ಯೆ), (ಕಾಲಂ 7), ಘಟಕ ವೆಚ್ಚ-290 * ಎರಡು ದಿನಕ್ಕೆ (ಕಾಲಂ-8) ಕಲಿಕಾ ಹಬ್ಬದ ತರಬೇತಿ ಆಗಿರುವುದರಿಂದ ವಿಶೇಷವಾಗಿ ಕಲಿಕಾ ಸಾಮಗ್ರಿಗಳನ್ನು ಖರೀದಿಸಲು ತಲಾ 100/- ರೂ.ಗಳನ್ನು ನೀಡಲಾಗಿದೆ, (ಕಾಲಂ-9).ಸದರಿ ತರಬೇತಿಗೆ ಸಂಬಂಧಿಸಿದ ಅನುದಾನವನ್ನು ಅನುಬಂಧ 1ರಲ್ಲಿರುವಂತೆ ತಾಲ್ಲೂಕುವಾರು ಒಟ್ಟು1,19,03,400 (ಒಂದು ಕೋಟಿ ಹತ್ತೊಂಬತ್ತು ಲಕ್ಷದ ಮೂರು ಸಾವಿರದ ನಾಲ್ಕು ನೂರು ರೂ,) ಗಳನ್ನು ಲೆಕ್ಕ ಶೀರ್ಷಿಕೆ 2202-01-113-0-02-059 ರಡಿ K2-PFMS ಮೂಲಕ 2022-23 ನೇ ಸಾಲಿನ Learning Enhancement program (LEP) ಚಟುವಟಿಕೆಯಡಿಯಲ್ಲಿ (01.13)ಮಿತಿ ನಿಗದಿಪಡಿಸಿ ಬಿಡುಗಡೆ ಮಾಡಲಾಗಿದೆ

ಅನುಬಂಧ-2 ರಲ್ಲಿ 290 ರೂ. ಗಳ ಬ್ರೇಕ್ ಅಪ್ ನೀಡಲಾಗಿದೆ. ಕಲಿಕಾ ಸಾಮಗ್ರಿಗಳನ್ನು ಖರೀದಿಸಲು ವಿಶೇಷವಾಗಿ ನೀಡಿದ ತಲಾ 100 ರೂ.ಗಳ ಜೊತೆಯಲ್ಲಿ ರೂ.290/- ರ ಬ್ರೇಕ್ ಅಪ್ ನಲ್ಲಿ ಕಲಿಕಾ ಸಾಮಗ್ರಿಗಳನ್ನು ಖರೀದಿಸಲು ಸೂಚಿಸಿದ ಮೊತ್ತವನ್ನು ಸಹ ಭರಿಸುವುದು. ಕಲಿಕಾ ಸಾಮಗ್ರಿಗಳನ್ನು ಕೊಳ್ಳುವಾಗ ಯಾವುದೇ ಗೊಂದಲಕ್ಕೆ ಒಳಗಾಗದಂತೆ , ಚಟುವಟಿಕೆಗೆ ಪೂರಕವಾದ ಹಾಗೂ ಯೋಗ್ಯವಾದ ಸಾಮಗ್ರಿಗಳನ್ನು ಕೊಳ್ಳಲು ನಿಮ್ಮ ತಾಲ್ಲೂಕಿನ ಟಿ.ಆರ್.ಪಿ ಗಳ ಸಹಾಯವನ್ನು ಕಡ್ಡಾಯವಾಗಿ ಪಡೆದು ಕೊಳ್ಳುವುದು.

ಶಿಬಿರಾರ್ಥಿಗಳಿಗೆ ವಾಸ್ತವಿಕ ಪ್ರಯಾಣ ಭತ್ಯೆಯನ್ನು ನೀಡುವುದು. ಟಿಆರ್.ಪಿ. ಗಳಿಗೆ ಹಾಗೂ ಜಿಲ್ಲೆಯಿಂದ ಬಂದಂತಹ ಜಿಲ್ಲೆಯ ಎಂ.ಆರ್.ಪಿ ಗಳಿಗೆ ಸಂಭಾವನೆ ( ಅನುಬಂಧ-2 ರಂತೆ ) ಹಾಗೂ ವಾಸ್ತವಿಕ ಪ್ರಯಾಣ ಭತ್ಯೆ ನೀಡುವುದು.

ಘಟಕ ವೆಚ್ಚ 290 ರೂ.ಗಳನ್ನು ಮೀರದಂತೆ ವೆಚ್ಚ ಭರಿಸಿ ಉಪಯೋಗಿತ ಪ್ರಮಾಣ ಪತ್ರವನ್ನು ಕಾರ್ಯ ಮುಗಿದ 10 ದಿನದೊಳಗಾಗಿ ಜಿಲ್ಲೆಯ ಉಪನಿರ್ದೇಶಕರು (ಆಡಳಿತ) ರವರಿಗೆ ಸಲ್ಲಿಸುವುದು ಜಿಲ್ಲೆಯವರು ಎಲ್ಲಾ ತಾಲ್ಲೂಕುಗಳ ಉಪಯೋಗಿತ ಪ್ರಮಾಣ ಪತ್ರವನ್ನು ಕ್ರೋಢೀಕರಿಸಿ 30/01/2023 ರೊಳಗೆ ರಾಜ್ಯ ಕಚೇರಿಯ ಇ- ಮೇಲ್ ವಿಳಾಸ ssk.kc2022@gmail.com ಕ್ಕೆ ಸಲ್ಲಿಸುವುದು .

ಅನುಬಂಧ -3 ರಲ್ಲಿ ಕಲಿಕಾ ಹಬ್ಬದ ತರಬೇತಿಗೆ ಸಂಬಂಧಿಸಿದ ಕಲಿಕಾ ಸಾಮಗ್ರಿಗಳ ಪಟ್ಟಿಯನ್ನು ನೀಡಲಾಗಿದೆ, ಅದರಂತೆ ಶಿಬಿರಾರ್ಥಿಗಳ ಸಂಖ್ಯೆಗನುಗುಣವಾಗಿ ಸಾಮಗ್ರಿಗಳನ್ನು ಖರೀದಿಸಿ ಕಲಿಕಾ ಹಬ್ಬದ ಕೈಪಿಡಿಯಲ್ಲಿರುವ ಚಟುವಟಿಕೆಗಳನ್ನು ಕಡ್ಡಾಯವಾಗಿ ನಿರ್ವಹಿಸುವುದು. ಕ್ಲಸ್ಟರ್ ಹಬ್ಬ ಹಾಗೂ ಸಂಭ್ರಮದ ಶನಿವಾರ ಶಾಲಾ ಹಬ್ಬಗಳಲ್ಲಿ ಪ್ರತಿಯೊಂದು ಚಟುವಟಿಕೆಗಳನ್ನು ವಿದ್ಯಾರ್ಥಿಗಳೇ ಮಾಡಬೇಕಾಗಿರುವುದರಿಂದ ಸ್ಥಳೀಯವಾಗಿ ವಸ್ತುಗಳನ್ನು ಖರಿದಿಸಿ, ಚಟುವಟಿಕೆ ಕೈಗೊಳ್ಳುವ ವಿಧಾನವನ್ನು ಶಿಬಿರಾರ್ಥಿಗಳಿಗೆ (ಶಿಕ್ಷಕರಿಗೆ) ತರಬೇತಿಯಲ್ಲಿ ರೂಢಿಗೊಳಿಸುವುದು.

ಅನುಬಂಧ -4 ರಂತೆ ತಾಲ್ಲೂಕು ಹಂತದ ತರಬೇತಿಗೆ ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿಗಳ ಮಾಹಿತಿಯನ್ನು ಸಂಗ್ರಹಿಸುವುದು.

ಜಿಲ್ಲಾ ನೋಡಲ್ ಅಧಿಕಾರಿಗಳು ತಾಲ್ಲೂಕು ಹಂತದ ತರಬೇತಿಗಳ ದಿನಾಂಕವನ್ನು ನಿರ್ಧರಿಸುವುದು ಮತ್ತು ತಾಲ್ಲೂಕು ಹಂತದ ತರಬೇತಿಯ ದಿನಾಂಕ 01.01.2023 ರಿಂದ 10.01.2023 ರವರೆಗೆ ಸಮಪ್ರಮಾಣದಲ್ಲಿ ಹಂಚಿಕೆ ಮಾಡುವುದು ಹಾಗೂ ಎಂ.ಆರ್.ಪಿ ಗಳನ್ನು ತಾಲ್ಲೂಕು ಹಂತದ ತರಬೇತಿಗೆ ನಿಯೋಜಿಸುವುದು.

ಅನುಬಂಧ-5 ರಂತೆ ಕ್ಲಸ್ಟರ್ ಹಬ್ಬಕ್ಕೆ ಆಯ್ಕೆಯಾದ ಸರ್ಕಾರಿ ಪ್ರೌಢಶಾಲೆ ಹೆಸರು ಹಾಗೂ ವಿಳಾಸ, ಮುಖ್ಯ ಶಿಕ್ಷಕರ ಹೆಸರು ಹಾಗೂ ಮೊಬೈಲ್ ಸಂಖ್ಯೆ , ಕ್ಲಸ್ಟರ್ ಹಬ್ಬಕ್ಕೆ ಆಯ್ಕೆಯಾದ ಸ್ಥಳ, ಹಬ್ಬ ನಡೆಯುವ ದಿನಾಂಕ, ಹೆಚ್ಚುವರಿ ಜವಾಬ್ದಾರಿ ವಹಿಸಿದ ಮುಖ್ಯ ಶಿಕ್ಷಕರ ವಿವರಗಳನ್ನು ಜಿಲ್ಲೆಯ ನೋಡಲ್ ಅಧಿಕಾರಿಗಳಿಗೆ ಸಲ್ಲಿಸುವುದು.

ತಾಲ್ಲೂಕು ಹಂತದ ತರಬೇತಿ ಯಶಸ್ವಿಯಾದಲ್ಲಿ ಮಾತ್ರ ಕ್ಲಸ್ಟರ್ ಹಬ್ಬ ಯಶಸ್ವಿಯಾಗುವುದು. ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳು ಸಂಪೂರ್ಣ ಜವಾಬ್ದಾರಿಯಿಂದ ತಾಲ್ಲೂಕು ಹಂತದ ತರಬೇತಿಯನ್ನು ಸುವ್ಯವಸ್ಥಿತವಾಗಿ ಆಯೋಜಿಸುವುದು.

ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ ಕರ್ನಾಟಕ,
ಬೆಂಗಳೂರು.

ಸೂಕ್ತ ಕ್ರಮಕ್ಕಾಗಿ:-

1. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕ (ಆಡಳಿತ) ರವರಿಗೆ .
2. ಕಲಿಕಾ ಹಬ್ಬದ ನೋಡಲ್ ಅಧಿಕಾರಿ ಡಿ,ವೈ,ಪಿ,ಸಿ .ರವರಿಗೆ.
3. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳವರಿಗೆ

ಪ್ರತಿ :-

ಕಛೇರಿ ಪ್ರತಿ.

ಅನುಬಂಧ-2

| ಘಟಕ ವೆಚ್ಚ ರೂ 290 ರ ಬ್ರೇಕ್ ಅಫ್ ವಿವರ:- ಕಲಿಕಾ ಹಬ್ಬಕ್ಕೆ ಸಂಬಂಧಿಸಿದಂತೆ | | | | | | | | | | | |
|---|---|---|---|---|---|---|---|---|---|---|---|
| ಮಾದರಿ 1 | | | | | | ಮಾದರಿ-2 | | | | | |
| ಶಿಬಿರದಲ್ಲಿ 40 ಶಿಬಿರಾರ್ಥಿಗಳಿದ್ದಾಗ | | | | | | ಶಿಬಿರದಲ್ಲಿ 120 ಶಿಬಿರಾರ್ಥಿಗಳಿದ್ದಾಗ | | | | | |
| ಕ್ರ. ಸಂ. | ವಿಷಯ | ಘಟಕ ವೆಚ್ಚ ( ರೂ.ಗಳಲ್ಲಿ) | ಶಿಬಿರಾರ್ಥಿಗಳ ಸಂಖ್ಯೆ | ದಿನಗಳು | ಒಟ್ಟು ಮೊತ್ತ (ರೂ.ಗಳಲ್ಲಿ) | ಕ್ರ. ಸಂ. | ವಿಷಯ | ಘಟಕ ವೆಚ್ಚ ( ರೂ. ಗಳಲ್ಲಿ | ಶಿಬಿರಾರ್ಥಿಗಳ ಸಂಖ್ಯೆ | ದಿನಗಳು | ಒಟ್ಟು ಮೊತ್ತ (ರೂ.ಗಳಲ್ಲಿ) |
| 1 | ಶಿಬಿರಾರ್ಥಿಗಳ ಊಟ, 2 ಸಲ ಚಹ,ಕಾಫಿ, ಸ್ನ್ಯಾಕ್ಸ್, ಕುಡಿಯುವ ಶುದ್ಧ ನೀರು. | 125 | 40 | 2 | 10000 | 1 | ಶಿಬಿರಾರ್ಥಿಗಳ ಊಟ, 2 ಸಲ ಚಹ,ಕಾಫಿ, ಸ್ನ್ಯಾಕ್ಸ್, , ಕುಡಿಯುವ ಶುದ್ಧ ನೀರು. | 125 | 120 | 2 | 30000 |
| 2 | ಶಿಬಿರಾರ್ಥಿಗಳ ವಾಸ್ತವ ಪ್ರಯಾಣ ಭತ್ಯೆ | 80 | 40 | 2 | 6400 | 2 | ಶಿಬಿರಾರ್ಥಿಗಳ ವಾಸ್ತವ ಪ್ರಯಾಣ ಭತ್ಯೆ | 80 | 120 | 2 | 19200 |
| 3 | ಸಂಪನ್ಮೂಲ ವ್ಯಕ್ತಿಗಳ ವಾಸ್ತವ ಪ್ರಯಾಣ ಭತ್ಯೆ | 80 | 5 | 2 | 800 | 3 | ಸಂಪನ್ಮೂಲ ವ್ಯಕ್ತಿಗಳ ವಾಸ್ತವ. ಪ್ರಯಾಣ ಭತ್ಯೆ | 80 | 15 | 2 | 2400 |
| 4 | ಸಂಪನ್ಮೂಲ ವ್ಯಕ್ತಿಗಳಿಗೆ ಸಂಭಾವನೆ | 300 | 5 | 2 | 3000 | 4 | ಸಂಪನ್ಮೂಲ ವ್ಯಕ್ತಿಗಳಿಗೆ ಸಂಭಾವನೆ | 300 | 15 | 2 | 9000 |
| 5 | ಲೇಖನ ಸಾಮಗ್ರಿಗಳಿಗಾಗಿ | 20 | 40 | 1 | 800 | 5 | ಲೇಖನ ಸಾಮಗ್ರಿಗಳಿಗಾಗಿ | 20 | 120 | 1 | 2400 |
| 6 | ಕಲಿಕಾ ಸಾಮಗ್ರಿ ಹಾಗೂ ಜೆರಾಕ್ಸ್ ವೆಚ್ಚಕ್ಕಾಗಿ | 800 | 1 | 2 | 1600 | 6 | ಕಲಿಕಾ ಸಾಮಗ್ರಿ ಹಾಗೂ ಜೆರಾಕ್ಸ್ ವೆಚ್ಚಕ್ಕಾಗಿ | 2400 | 1 | 2 | 4800 |
| 7 | ಸಾದಿಲ್ವಾರು ವೆಚ್ಚಕ್ಕಾಗಿ- ಶೌಚಾಲಯ, ಸಭಾಂಗಣ ಸ್ವಚ್ಛತೆಗಾಗಿ, ಇಂಟರ್ನೆಟ್ ಬಳಕೆಗಾಗಿ, ಜನರೇಟರ್ ಗಾಗಿ, ದಾಖಲೀಕರಣಕ್ಕಾಗಿ, ವರದಿಗಾಗಿ ಇತ್ಯಾದಿ . | 600 | 1 | 1 | 600 | 7 | ಸಾದಿಲ್ವಾರು ವೆಚ್ಚಕ್ಕಾಗಿ- ಶೌಚಾಲಯ, ಸಭಾಂಗಣ ಸ್ವಚ್ಛತೆಗಾಗಿ, ಇಂಟರ್ನೆಟ್ ಬಳಕೆಗಾಗಿ, ಜನರೇಟರ್ ಗಾಗಿ, ದಾಖಲೀಕರಣಕ್ಕಾಗಿ, ವರದಿಗಾಗಿ ಇತ್ಯಾದಿ . | 1800 | 1 | 1 | 1800 |
| | ಒಟ್ಟು ಮೊತ್ತ | | | | 23200 | | ಒಟ್ಟು ಮೊತ್ತ | | | | 69600 |
| 8 | ಕಲಿಕಾ ಹಬ್ಬಕ್ಕಾಗಿ ವಿಶೇಷ ವಾಗಿ ಕಲಿಕಾ ಸಾಮಾಗ್ರಿಕೊಳ್ಳಲು ತಲಾ 100 ರೂಗಳಂತೆ ಅವಕಾಶ ಕಲ್ಪಿಸಲಾಗಿದೆ. | 100 | 40 | 1 | 4000 | 8 | ಕಲಿಕಾ ಹಬ್ಬಕ್ಕಾಗಿ ವಿಶೇಷ ವಾಗಿ ಕಲಿಕಾ ಸಾಮಾಗ್ರಿಕೊಳ್ಳಲು ತಲಾ 100 ರೂಗಳಂತೆ ಅವಕಾಶ ಕಲ್ಪಿಸಲಾಗಿದೆ. | 100 | 120 | 1 | 12000 |
| | ಒಟ್ಟು ಮೊತ್ತ | | | | 27200 | | ಒಟ್ಟು ಮೊತ್ತ | | | | 81600 |

ಸೂಚನೆ :- 40 ಶಿಬಿರಾರ್ಥಿಗಳಿಗೆ ತರಬೇತಿ ನೀಡಲು 5 ಟಿ.ಆರ್.ಪಿ ಗಳು, 40 ರಿಂದ 60 ಕ್ಕೆ 7 ಟಿ.ಆರ್.ಪಿ ಗಳು, 60 ರಿಂದ 80 ಕ್ಕೆ 10 ಟಿ.ಆರ್.ಪಿ ಗಳು, 80 ರಿಂದ 100 ಕ್ಕೆ 12 ಟಿ.ಆರ್.ಪಿ ಗಳು 100ರಿಂದ 120 ಮೇಲ್ಪಟ್ಟು 15 ಟಿ.ಆರ್.ಪಿ. ಗಳನ್ನು ತರಬೇತಿ ನೀಡಲು ಬಳಸಿಕೊಳ್ಳಬಹುದಾಗಿದೆ.

ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ ಕರ್ನಾಟಕ
ಬೆಂಗಳೂರು

ಅನುಬಂಧ - 3

| ತರಬೇತಿಗೆ ಅವಶ್ಯಕತೆಯಿರುವ ಕಲಿಕಾಸಾಮಗ್ರಿಗಳು (120 ಜನರಿಗೆ) | | |
|---|---|---|
| ಕ್ರ.ಸಂ | ವಸ್ತುಗಳು | ಪ್ರಮಾಣ |
| 1 | ಡ್ರಾಯಿಂಗ್ ಶೀಟ್ | 100 |
| 2 | ಕಪ್ಪು ಡ್ರಾಯಿಂಗ್ ಶೀಟ್ | 75 |
| 3 | ಟ್ವೈನ್ ದಾರ | 2 ಬಂಡಲ್ |
| 4 | ವಾಟರ್ ಕಲರ್ ಕೆಂಪು, ಹಸಿರು, ಹಳದಿ, ನೀಲಿ | ಪ್ರತಿಯೊಂದೂ 4 ಬಾಟಲ್ |
| 5 | ಟೂಥ ಬ್ರಷ್ ಸಾಮಾನ್ಯ | 20 |
| 6 | ಪೇಪರ್ ಪ್ಲೇಟ್ (ಲ್ಯಾಮಿನೇಟೆಡ್) | 20 |
| 7 | ಪೇಪರ್ ಟೀಕಪ್ | 500 |
| 8 | ಫೆವಿಕಾಲ್ ಎಮ್ ಆರ್ 100 ಎಮ್ ಎಲ್ | 50 |
| 9 | ಕತ್ತರಿ ಮೀಡಿಯಂ ಸೈಜ್ | 60 |
| 10 | A4 ಪೇಪರ್(ಬಿಳಿ) | 5ಬಂಡಲ್ |
| 11 | A4 ಪೇಪರ್(ಮಿಕ್ಸಡ್ ಕಲರ್) | 5 ಬಂಡಲ್ |
| 12 | ಸ್ಕೆಚ್ ಪೆನ್ | 30 ಸೆಟ್ |
| 13 | ಡಯನಿಂಗ್ ಟೇಬಲ್ ಮೇಲೆ ಹಾಕುವ ಪೇಪರ್ ರೋಲ್ | 1 ರೋಲ್ |
| 14 | ಕ್ರಾಫ್ಟ್ ಪೇಪರ್ A4 ಸೈಜ್ | 400 |
| 15 | ಮಾರ್ಕರ್ ಪೆನ್ ( ಟಿಸೆಲ್ ಮಾರ್ಕರ್ ಪೆನ್) | 10ಸೆಟ್ |
| 16 | ಫೋಟೋ ಸೈಜ ಕಾರ್ಡ್ | 120 |
| 17 | ಟೂಥ್ ಪಿಕ್ ದೊಡ್ಡದು | 4 ಪ್ಯಾಕ್ |
| 18 | ಸೆಲ್ ಟೇಪ್ 1 ಇಂಚ್ | 15 |
| 19 | ಸ್ಟೆಪ್ಲರ್ & ಪಿನ್ | 20 |
| 20 | ಪ್ಲಾಸ್ಟಿಕ್ ಸ್ಟ್ರಾ | 10 ಪ್ಯಾಕ್ |
| 21 | ಎಲಾಸ್ಟಿಕ್ ದಾರ | 100 ಮೀಟರ್ |
| 22 | ಫೋಮ್ ಶೀಟ್ 1/2 ಇಂಚ್ | 4 ಶೀಟ್ |
| 23 | ಪೇಪರ್ ಸ್ಟ್ರಾ | 150 |
| 24 | ಖಾಲಿ ಬಾಟಲ್ | 30 +30=60 |
| 25 | ಸೇಫ್ಟಿ ಪಿನ್ | 30 |
| ವ | ಉಪ್ಪು | 1ಪ್ಯಾಕ್ |
| 27 | ಪೆನ್ಸಿಲ್ | 50 |
| 28 | ಹ್ಯಾಕ್ ಸಾ ಬ್ಲೇಡ್ | 10 |
| 29 | ರಬ್ಬರ್ ಬ್ಯಾಂಡ್ | 2 ಪ್ಯಾಕ್ |
| 30 | 2 ಇಂಚು ನೀಲಿ ಚೆಂಡು | 120 |
| 31 | 1 ಇಂಚು ಬಿಳಿ ಚೆಂಡು | 120 |
| 32 | ಕಾರ್ಡ್ ಬೋರ್ಡ್ | 20 ಶೀಟ್ |
| 33 | ಮೇಣದ ಬತ್ತಿ | 50 |
| 34 | ದೊಡ್ಡ ಸೂಜಿ | 50 |
| 35 | ರಬ್ಬರ್ ಇರುವ ಪೆನ್ಸಿಲ್ | 50 |
| 36 | ಗುಂಡು ಸೂಜಿ | 2 ಪ್ಯಾಕ್ |
| 37 | ಕಟ್ಟರ್ | 60 |
| 38 | ಅಲ್ಯುಮಿನಿಮ್ ಫೋಯಿಲ್1 | 3 ರೋಲ್ |
| 39 | ಅಳತೆಯ ಟೇಪ್ 100 ಮೀಟರ್ | 1 |
| 40 | ಪೊಟೆಟೋ ಟ್ವಿಸ್ಟರ್ ಕಡ್ಡಿ | 20 |
| 41 | ಬುಗುರಿಯ ದಾರ | 100 mts |
| 42 | packaging tape red | 5role |
| 43 | ಟ್ರೇಸಿಂಗ್ ಶೀಟ್ | 100 |

| ಕ್ರ.ಸಂ | ವಸ್ತುಗಳು | ಪ್ರಮಾಣ |
|---|---|---|
| 44 | Big cardboard box ( 25"×25") | 20 |
| 45 | ಕನ್ನಡಿ 1ಅಡಿ ಉದ್ದ ಹಾಗೂ ಅಗಲ | 2 |
| 46 | led torch | 10 |
| 47 | brown tape 2" | 10 |
| 48 | ಕನ್ನಡಿ 2.2"ಇಂಚು | 120 |
| 49 | stapler ಪಿನ್ | 10 |
| 50 | ಶ್ಯಾಂಪು | 1 ಲೀ |
| 51 | ಗ್ಲಿಸರಿನ್ ½ ಲೀಟರ್ | ½ lit. |
| 52 | ಉಲ್ಲನ್ ಕ್ಲಾತ್ | 2 mt. |
| 53 | feviquick | 20 |
| 54 | ರಬ್ಬರ್ ಮತ್ತು ಮೆಂಡರ್ | 40 |
| 55 | stapler ಪಿನ್ | 20 |
| 56 | ಬೆನ್ ಹ್ಯಾಮ್ ಚಕ್ರ | 120 |
| 57 | ದೃಷ್ಠಿಗೊಂಬೆ | 120 |
| 58 | ಮರಕುಟಿಗ | 120 |
| 59 | ಸೂರ್ಯಸಂದೇಶ | 120 |
| 60 | ನ್ಯೂಟನ್ ಚಕ್ರ | 120 |
| 61 | ತ್ರೀಡಿ ಕನ್ನಡಕ | 120 |
| 62 | ಲೆನ್ಸ್ | 120 |
| 63 | ಪಿವಿಸಿ ಪೈಪ್ | 120 |
| 64 | ಕಾಲರ್ | ಅಗತ್ಯಕ್ಕೆ ತಕ್ಕಂತೆ |
| 65 | ರೆಡ್ಯೂಸರ್ | ಅಗತ್ಯಕ್ಕೆ ತಕ್ಕಂತೆ |
| 66 | ಫಿನಾಪ್ತಲಿನ್ | ಅಗತ್ಯಕ್ಕೆ ತಕ್ಕಂತೆ |
| 67 | ಸಕ್ಕರೆ | ಅಗತ್ಯಕ್ಕೆ ತಕ್ಕಂತೆ |
| 68 | ಅರಿಶಿಣ | ಅಗತ್ಯಕ್ಕೆ ತಕ್ಕಂತೆ |
| 69 | ಸೋಪ್ ಪೌಡರ್ | **ಅಗತ್ಯಕ್ಕೆ ತಕ್ಕಂತೆ** |

**ವಿಶೇಷ ಸೂಚನೆ :- ಶಿಭಿರಾರ್ಥಿಗಳ ಸಂಖ್ಯೆಗನುಗುಣವಾಗಿ ಕಲಿಕಾ ಸಾಮಗ್ರಿಗಳನ್ನು ಕೊಂಡುಕೊಳ್ಳುವುದು. ಎಂ.ಆರ್.ಪಿ ಗಳಸಭೆ ಕರೆದು, ಚಟುವಟಿಕೆ ಆಧಾರಿತವಾಗಿ ಯಾವುದೇ ಗೊಂದಲಕ್ಕೆ ಒಳಗಾಗದೇ ಸಾಮಾನು ಖರೀದಿಸುವುದು.**

20.10.2018

ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ ಕರ್ನಾಟಕ